ಮಲಪ್ರಭಾ ಬಲದಂಡೆ ನಾಲೆಯ ಕಿ ಮೀ 33 ರಿಂದ 78ರ ವರೆಗಿನ ಸುಧಾರಣೆ ಕಾಮಗಾರಿಗಳು ಪೂರ್ಣಗೊಂಡ ನಂತರ ಕೊನೆಯ ಭಾಗದ ಹಂಚಿಕೆಗಳ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸುಧಾರಣೆಯ ಲಾಭ ಲಭ್ಯವಾಗುವುದು ಮಲಪ್ರಭಾ ಎಡದಂಡೆ ಕಾಲುವೆಗಳ ಸುಧಾರಣೆ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಮುಂದಿನ ವರ್ಷಗಳಲ್ಲಿ ಸುಧಾರಣೆಯ ಲಾಭವು ದೊರೆಯುತ್ತದೆ

511(553) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಲಪ್ರಭಾ ಯೋಜನೆಯಲ್ಲಿ ಒಟ್ಟು ಜಾಕವೆಲ್ಸ್‌ಗಳ ಸಂಖ್ಯೆ ಎಷ್ಟು,

ಆ) ಈ ಜಾಕ್‌ವೆಲ್‌ಗಳಿಂದ ಎಷ್ಟು ಹಳ್ಳಿಗಳಿಗೆ ಉಪಯೋಗ–ವಾಗುವುದು,

ಇ) ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಕೊನೆಯ ಹಂತದ ರೈತರಿಗೆ ಹಂಚು ಕಾಲುವೆಗಳ ದುರಸ್ತಿಯಾಗದೇ ನೀರಿನ ಸೌಲಭ್ಯ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಂಚು ಕಾಲುವೆಗಳನ್ನು ದುರಸ್ತಿ ಮಾಡಲಾಗಿದೆಯೇ,

ಉ) ಹಾಗಿದ್ದಲ್ಲಿ, ರೈತರಿಗೂ ನೀರಿನ ಸೌಕರ್ಯ ಒದಗಿಸಲು ಸರ್ಕಾರದ ಕ್ರಮವೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಮಲಪ್ರಭಾ ಯೋಜನೆಯಲ್ಲಿ ಒಟ್ಟು 11 ಜಾಕ್‌ವೆಲ್‌ಗಳು ಇರುತ್ತವೆ

ಆ) ಇವುಗಳಿಂದ ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕಿನ ಒಟ್ಟು 62 ಹಳ್ಳಿಗಳಿಗೆ ಉಪಯೋಗವಾಗುತ್ತಿದೆ

ಇ) ಬಂದಿದೆ

ಈ) ಸರಕಾರದ ಮಾನದಂಡಗಳನ್ವಯ ಹಂಚು ಕಾಲುವೆಯ ಮುಖ್ಯ ಕಾಲುವೆಗಳ ದುರಸ್ತಿಗಾಗಿ ಅನುದಾನ ಬಿಡುಗಡೆಯಾಗುತ್ತಿದ್ದು, ಲಭ್ಯವಾಗುತ್ತಿರುವ ಅನುದಾನದಡಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ

ಉ) ಪ್ರತಿ ವರ್ಷದ ನೀರಾವರಿ ಹಂಗಾಮುಗಳಲ್ಲಿ ರೈತರಿಗೆ ಸಮರ್ಪಕ ನೀರಾವರಿಗಾಗಿ ನೀರಿನ ಸೌಕರ್ಯ ಒದಗಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

512(554) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರೇಷ್ಮೆ ಇಲಾಖೆಯು 29 ಎಕರೆ ಜಮೀನುಳ್ಳ ಬೃಹತ್ ಫಾರಂ ಹೊಂದಿದ್ದು ಮತ್ತು 20 ಜನ ನೌಕರರು ಇದ್ದು ಅಲ್ಲಿ ಸುವ್ಯವಸ್ಥೆಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮಲಪ್ರಭಾ ಜಲಾಶಯದಿಂದ ಪಂಪ್‌ಸೆಟ್ ಮುಖಾಂತರ ರೇಷ್ಮೆ ಕೃಷಿಗೆ ನೀರನ್ನು ಒದಗಿಸಲು ಈಗಾಗಲೇ ಅಂದಾಜು ಪತ್ರಿಕೆ ತಯಾರಾಗಿದ್ದು ಅನುಮೋದನೆ ದೊರೆತಿದ್ದರೂ ಸಹ ಈವರೆವಿಗೆ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು,

ಇ) ಹಾಗಿದ್ದಲ್ಲಿ, ಮಲಪ್ರಭಾ ಜಲಾಶಯದಿಂದ ಪಂಪ್‌ಸೆಟ್ ಮುಖಾಂತರ ರೇಷ್ಮೆ ಕೃಷಿಗೋಸ್ಕರ 29 ಎಕರೆ ಜಮೀನಿಗೆ ನೀರು ಪೂರೈಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ರೇಷ್ಮೆ ಕೃಷಿ ಕ್ಷೇತ್ರದ ಒಟ್ಟು ವಿಸ್ತೀರ್ಣ 31 10 ಎಕರೆಗಳು ಈ ಕೃಷಿ ಕ್ಷೇತ್ರದಲ್ಲಿ 2 'ಸಿ' ಗುಂಪಿನ ಮತ್ತು 3 'ಡಿ' ದರ್ಜೆಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಈ ಕೃಷಿ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಇಲ್ಲದ ಕಾರಣ ಮಲಪ್ರಭಾ ನದಿಯಿಂದ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯವನ್ನು ಪಡೆಯಲು ನಬಾರ್ಡಿನ ಆರ್ ಐ ಡಿ ಎಫ್ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಲಾಗಿದೆ

ಆ) ಈ ಕಾರ್ಯಕ್ರಮಕ್ಕೆ ರೂ 40 20 ಲಕ್ಷಗಳ ಅಂದಾಜು ತಯಾರಿಸಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕೆ ನಬಾರ್ಡ್ ಸಂಸ್ಥೆಗೆ ಈ ಪ್ರಸ್ತಾವನೆ ಕಳುಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ